

**ಎಲೆಗಳ ಮೇಲೆ ವಿಷದ ಮಳೆ...**
ಬೆಳೆಗಳ ಮೇಲೆ ದಾಳಿ ಮಾಡುವ ಕೀಟಗಳನ್ನು ಕೊಂದು ಗಿಡವನ್ನು ರಕ್ಷಿಸುತ್ತೇವೆಂಬ ನಂಬಿಕೆಯಲ್ಲಿ ಭೂಮಿಗೆ ವಿಷ ಊಡಿಸುತ್ತಿರುವುದು ಈ ರೈತನಿಗಾದರೂ ತಿಳಿದಿರಬಹುದೇ?

ಮತ್ತು ರಾಸಾಯನಿಕ ಗೊಬ್ಬರ ಯಾವಾಗ ವಿಶ್ವಮಾನ್ಯವಾಯಿತೋ ಅಲ್ಲಿಂದ ಮಾನವಕುಲದ ನಾಶ ಆರಂಭವಾಯಿತು. ಇಲ್ಲಿ ವಿಷದ ದಾನಿಗಳು ಮಾತ್ರ ಬೇರೆ ಬೇರೆ. ಪರಿಣಾಮ ಒಂದೇ. ಗುಂಡು, ಬಾಂಬು, ಕ್ಷಿಪಣಿಗಳು ಮನುಷ್ಯರನ್ನು ಕ್ಷಣಾರ್ಧದಲ್ಲಿ ಸಾಯಿಸಿದರೆ ಅನ್ನದ ವಿಷ ನಿಧಾನವಾಗಿ ಕೊಲ್ಲುತ್ತದೆ.

ನೆಲಮೂಲದ ಸುಸ್ಥಿರ, ಪರಂಪರಾಗತ ಕೃಷಿ ಆಹಾರ ವ್ಯವಸ್ಥೆ ಕುಸಿಯುವಂತೆ ಮಾಡಿ, ಆಹಾರವನ್ನು ವಿಷರೂಪಗೊಳಿಸುವ ಪ್ರಯತ್ನಗಳಾಗುತ್ತಿವೆ. ಗಿಡ, ಬೆಳೆಗಳಿಗೆ ಯಾವುದೇ ಹೊರಚೋದಕಗಳಿಲ್ಲದೆ, ರಾಸಾಯನಿಕ ಕೀಟನಾಶಕಗಳಿಲ್ಲದೆ ಯಾವುದೇ ಬೆಳೆ ಬೆಳೆಯಲಾರದು ಎಂಬ ಗೊಬ್ಬರ ಕೀಟನಾಶಕ ಕಂಪನಿಗಳ ಹುನ್ನಾರ ಇಂದು ದೇಶದಾದ್ಯಂತ ಹಬ್ಬಿದೆ. ಜಗತ್ತು ಇಂದು ಅನ್ನಕ್ಕಾಗಿ, ತುಟಿ, ಬಣ್ಣ, ಸ್ವಾದಕ್ಕಾಗಿ ಕಾದಿದೆ ಎಂಬುದು ಈ ಉತ್ಪಾದಕರಿಗೆ ಚೆನ್ನಾಗಿಯೇ ಗೊತ್ತಿದೆ.

ಈ ಪ್ರಪಂಚದಲ್ಲಿಂದು ಕಾಲಿಲ್ಲದವನು ಇರಬಹುದು, ಕಣ್ಣಿಲ್ಲದವರು, ಬಾಯಿ ಬಾರದವರು, ಕಿವಿ ಕೇಳದವರು ಇರಬಹುದು. ಆದರೆ ಹೊಟ್ಟೆ ಇಲ್ಲದವರು ಬಹುಶಃ ಯಾರೂ ಇಲ್ಲ. ಇದೇ ಹೊಟ್ಟೆ ಇಂದು ಜಾಗತಿಕ ಆಹಾರ ದಂಧೆಗೆ ಮೂಲವಾಗುತ್ತಿದೆ. ಈ ಪ್ರಪಂಚದ ಕೋಟಿ ಕೋಟಿ ಜನ ಏನು ತಿನ್ನಬೇಕು, ಹೇಗೆ ತಿನ್ನಬೇಕು, ಎಲ್ಲಿ ತಿನ್ನಬೇಕು, ಎಷ್ಟು ತಿನ್ನಬೇಕು – ಈ ತೀರ್ಮಾನಗಳನ್ನು ಆಹಾರ ರಾಜಕಾರಣ

**ಈ ದೇಶದ ಅನ್ನ ಉತ್ಪಾದಿಸುವ ಕಟ್ಟಕಡೆಯ ಪ್ರಜೆ, ಪಕ್ಕಾ ಗ್ರಾಮ್ಯ ರೈತನ ಅಡುಗೆ ಮನೆಗೂ ಕಾರ್ಪೋರೆಟ್ ಜಗತ್ತು ಪ್ರವೇಶಿಸುತ್ತಿರುವುದು ದುರಂತ.**

## ಅಧಿಕಾರಸ್ಥ ಅನುಭೋಗಿ

ಇಡೀ ಜೀವ ಸಂಕುಲದಲ್ಲಿ ಮನುಷ್ಯ ಅಧಿಕಾರಸ್ಥ ಅನುಭೋಗಿಯಾಗಲು ಮುಖ್ಯ ಕಾರಣ ಅವನ ನಂಬಿಸುವ ಮತ್ತು ಸಹಕರಿಸುವ ಸಾಮರ್ಥ್ಯ. ಬರೀ ಮಾತಿನ ಮೂಲಕ ತನ್ನನ್ನು ನೋಡದವರನ್ನು ಮತ್ತು ತನ್ನೆದುರು ಇಲ್ಲದಿರುವವರನ್ನು ಅವನು ಸುಲಭವಾಗಿ ನಂಬಿಸಬಲ್ಲ. ಒಂದು ಮಂಗ ಇನ್ನೊಂದು ಮಂಗನ ಕೈಯಲ್ಲಿರುವ ಬಾಳೆಹಣ್ಣನ್ನು ನಿನಗೆ ಸ್ವರ್ಗ ತೋರಿಸುತ್ತೇವೆ ಎಂದು ನಂಬಿಸಿ ಅಥವಾ ನರಕ ತೋರಿಸುತ್ತೇವೆ ಎಂದು ಬೆದರಿಸಿ ಗಿಟ್ಟಿಸದು. ಆದರೆ ಅದೇ ಮಂಗನಿಂದ ವಿಕಾಸ ಹೊಂದಿದ ಮನುಷ್ಯ– ನಾವು ಇನ್ನೊಬ್ಬರನ್ನು ಮುಟ್ಟದೆ, ತಟ್ಟದೆ, ಬಡಿಯದೆ, ಬಗ್ಗಿಸದೆ ಬರೀ ಬಾಯಿ ಮಾತಿನಲ್ಲೇ ಸ್ವರ್ಗದ ಆಸೆ ಹುಟ್ಟಿಸಿ ಅದನ್ನು ಪಡೆಯಬಲ್ಲೆವು. ಇದರ ಪರಿಣಾಮವನ್ನು ಇಂದು ಇಡೀ ಜೀವಜಗತ್ತು ಅನುಭವಿಸುತ್ತಿದೆ.

ಈ ಇಡೀ ಜಗತ್ತನ್ನು 10–15 ಬಾರಿ ಸರ್ವನಾಶ ಮಾಡಬಲ್ಲಷ್ಟು ಆಟಂಬಾಂಬುಗಳು ಬೇರೆ ಬೇರೆ ರಾಷ್ಟ್ರಗಳಲ್ಲಿವೆ. ಕ್ಷಿಪಣಿಗಳಿವೆ. ಯುದ್ಧ ವಿಮಾನಗಳಿವೆ. ಮಿಲಿಟರಿ ಇದೆ. ಪ್ರತಿಬಾರಿ ನಮ್ಮ ಬಜೆಟ್ಟಿನಲ್ಲಿ ಯುದ್ಧ ತಯಾರಿಗೆ, ಯುದ್ಧೋಪಕರಣಗಳಿಗೆಂದೇ ಕೋಟಿ ಕೋಟಿ ವ್ಯಯಿಸುತ್ತೇವೆ. ಆದರೆ ಈ ಜಗತ್ತಿನ ಜೀವಕೋಟಿಗಳಿಗೆ ಬದುಕಲು ಬೇಕಾಗುವ ಪರಿಶುದ್ಧ ನೀರು ಇದೆಯಾ? ಹಾಳಾಗದ, ವಿಷ ಸೇರದ ಅನ್ನ ಇದೆಯಾ? ಮಲಿನಗೊಳ್ಳದ ಗಾಳಿ ಇದೆಯಾ – ನಾವ್ಯಾರು ಯೋಚಿಸುವುದೇ ಇಲ್ಲ. ಹಾಗಂತ ಭೂಮಿಯ ಮೇಲಿನ ಈ ನೀರನ್ನು, ಗಾಳಿಯನ್ನು, ಮಣ್ಣನ್ನು ಹಾಳು ಮಾಡಿದ್ದು ಮಂಗ ಅಲ್ಲ, ನಾಯಿಯಲ್ಲ, ಕೋಗಿಲೆಯಲ್ಲ, ನಾವು ಮನುಷ್ಯರು! ಕುಡಿಯುವ ಈ ಭೂಮಿಯ ಎಲ್ಲಾ ಜೀವಿಗಳಿಗೂ ಬೇಕಾಗುವ ನೀರನ್ನು ನಾವೇ ಹಾಳು ಮಾಡಿ ಮತ್ತೆ ಅದೇ ನೀರನ್ನು ಪರಿಶುದ್ಧ ಎಂಬ ಹೆಸರಿನಲ್ಲಿ ಬಾಟ್ಲೆಯಲ್ಲಿ ತುಂಬಿ ಮಾರುತ್ತೇವೆ! ಭೂಮಿಗೆ ವಿಷ ಸೇರಿಸಿದ ನಾವೇ ಇದು ಪರಿಶುದ್ಧ ಅಕ್ಕಿ, ಶುದ್ಧ ಗೋಧಿಪುಡಿ ಎಂದು ಬಿಕರಿ ಮಾಡುತ್ತೇವೆ. ಗಾಳಿಯನ್ನು ಶುದ್ಧತೆಯ ಹೆಸರಿನಲ್ಲಿ ಮಾರುವ ಉದ್ಯಮವೂ ಆರಂಭಗೊಂಡಿದೆ.

'ಅಭಿವೃದ್ಧಿ' ಈ ಭೂಮಿಗೆ ದಿನೇ ದಿನೇ ಅಪಾಯವನ್ನು ಒಡ್ಡುತ್ತಿದೆ. ಶಾಪವಾಗುತ್ತಿದೆ. ಈ ಪ್ರಪಂಚದ ಬಹುಪಾಲು ಶ್ರೀಮಂತರು, ಅಭಿವೃದ್ಧಿಪರರು. ಒಂದು ಕಾಲದ ಹಳ್ಳಿಗರೇ. ಗ್ರಾಮದ ಬೇರಿನವರೇ. ಇವತ್ತಿಗೂ ನಮಗೆ ಅನ್ನ, ನೀರು, ಹಾಲು, ತರಕಾರಿ ಕೊಡುವ, ಬಾಲ್ಯದಲ್ಲಿ ನಮ್ಮನ್ನೆಲ್ಲಾ ಜತನದಿಂದ ಪೋಷಿಸಿದ ಹಳ್ಳಿಗಳು ಹೇಗಿವೆ ಎಂದು ಗಮನಿಸುವ ಮನಃಸ್ಥಿತಿಯಲ್ಲಿ ನಾವಿಲ್ಲ. ಹೆಚ್ಚು ಓದಿದ್ದೇನೆ, ದುಡ್ಡಿದೆ, ಸುಖ ನಗರದಲ್ಲಿದೆ ಎಂಬ ಒಂದೇ ಒಂದು ಕಾರಣಕ್ಕಾಗಿ ನಮ್ಮ ಹಳ್ಳಿಗಳಿಂದು ನಿಷ್ಪ್ರಯೋಜಕ ಎಂದು ಕಾಣಲಾರಂಭಿಸಿದೆ. ಇಲ್ಲಿಂದ ಬೇರು ಕಳಚಿಕೊಂಡರಷ್ಟೇ ನೆಮ್ಮದಿ, ಮರ್ಯಾದೆ ಎಂಬ ಮನೋಭಾವನೆ ಬೆಳೆದಿದೆ.